completion ಹಂತದಲ್ಲಿದೆ. ಎರಡು ಮಾತ್ರ ಫೌಂಡೇಷನ್ ಹಾಕಿದೆ. ಅದನ್ನು ಆದಷ್ಟು ಬೇಗ ಮುಗಿಸಿ ಹಣವನ್ನು ಕೂಡ ಮಾರ್ಚ್ 31ರಲ್ಲಿ ಬಿಡುಗಡೆಯಾಗಿದೆ. ಅದನ್ನು ಬೇಗ ಸಂಪೂರ್ಣ ಮಾಡಲು ಸೂಕ್ತ ಆದೇಶವನ್ನು ಕೊಡುತ್ತೇನೆ. ಮುಂದೆ ಸಂಪೂರ್ಣವಾಗಿ ಕಟ್ಟಡ ನಾಶವಾಗಿರತಕ್ಕದ್ದು ಮತ್ತು ರಿಪೇರಿ ಇರುವುದಕ್ಕೆ ಸರ್ವ ಶಿಕ್ಷಣ ಅಭಿಯಾನದಲ್ಲಿ ಮುಂದಿನ ವರ್ಷದಲ್ಲಿ ಹಣ ಬಿಡುಗಡೆಯಾಗುತ್ತದೆ. ಆಗ ಅವರೆ ಜಿಲ್ಲಾಮಟ್ಟದಲ್ಲಿ ತೀರ್ಮಾನ ತೆಗೆದುಕೊಂಡು ಹೆಚ್ಚುವರಿ ಕೊಡಲು ವ್ಯವಸ್ಥೆಯನ್ನು ಮಾಡಬಹುದು.

ಆಶ್ರಯ ಸಮಿತಿಗಳ ರಚನೆ

102(321); ಶ್ರೀ ಶ್ರೀರಾಮರೆಡ್ಡಿ ಜಿ.ವಿ.(ಬಾಗೇಪಲ್ಲಿ);

ಮಾನ್ಯ ಶ್ರೀ ಡಿ.ಟಿ.ಜಯಕುಮಾರ್ (ವಸತಿ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಗ್ರಾಮೀಣ ಪ್ರದೇಶದಲ್ಲಿ ವಸತಿ ಸೌಕರ್ಯವಿಲ್ಲದೆ ಜನತೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕ್ಷೇತ್ರವಾರು ಅಥವಾ ತಾಲ್ಲೂಕುವಾರು ಆಶ್ರಯ ಸಮಿತಿ ರಚಿಸಲು ಸರ್ಕಾರ ಇಚ್ಚಿಸಿದೆಯೇ;

ಇ) ಇದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಡಿ.ಟಿ.ಜಯಕುಮಾರ್ (ವಸತಿ ಸಚಿವರು)

ಅ) ಹೌದು.

ಗ್ರಾಮೀಣ ಪ್ರದೇಶದಲ್ಲಿ ವಸತಿ ಸೌಕರ್ಯವಿಲ್ಲದೆ ತೊಂದರೆ ಅನುಭವಿಸುತ್ತಿರುವ ಜನರಿಗಾಗಿ ಪ್ರತಿ ವರ್ಷ ರಾಜ್ಯದಲ್ಲಿ ಆಶ್ರಯ ಅಂಬೇಡ್ಕರ್ ಹಾಗೂ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾದ ಇಂದಿರಾ ಆವಾಜ್ ಯೋಜನೆಗಳಡಿ ಮನೆಗಳ ಗುರಿಯನ್ನು ನಿಗದಿಪಡಿಸಿ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಡಲಾಗುತ್ತಿದೆ.

ಆ) ಸರ್ಕಾರವು ಗ್ರಾಮೀಣ ಪ್ರದೇಶಕ್ಕೆ ಬರುವ ಆಶ್ರಯ ಸಮಿತಿಗಳನ್ನು ರದ್ದುಪಡಿಸಿ ಗ್ರಾಮೀಣ ಪ್ರದೇಶದಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಗೆ ಸರ್ಕಾರವು ಅಧಿಸೂಚನೆ ಸಂಖ್ಯೆ SAMVYASHAE 33 SHASANA 2002 ದಿನಾಂಕ 22.09.2003 ರಲ್ಲಿ ತಿದ್ದುಪಡಿಯನ್ನು ಮಾಡಿದ್ದು ಸದರಿ ತಿದ್ದುಪಡಿಯ ಪ್ರಕಾರ ವಸತಿ ಮತ್ತು ನಿವೇಶನ ಯೋಜನೆಗಳಲ್ಲಿ ಸರಕಾರವು ನೀಡುವ ಮನೆ, ನಿವೇಶನಗಳ ಗುರಿಗೆ ತಕ್ಕಂತೆ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಗಳಲ್ಲಿ ಮಾಡುವ

ಅಧಿಕಾರವು ಗ್ರಾಮ ಪಂಚಾಯತಿಗಳ ಕಾರ್ಯವ್ಯಾಪ್ತಿಗೆ ಬರುತ್ತದೆ. ಗ್ರಾಮಸಭೆಯಲ್ಲಿ ಅಂತಿಮಗೊಳಿಸಿದ ಪಟ್ಟಿಯನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಜಾಗೃತ ದಳದ ಮುಂದೆ ಮಂಡಿಸಿ ಅಂತಿಮಗೊಳಿಸಲಾಗುವುದು.

ಇ) ನಗರ ಪ್ರದೇಶಕ್ಕೆ ಸಂಬಂಧಪಟ್ಟಂತೆ ನಗರ ಆಶ್ರಯ ಸಮಿತಿಗಳನ್ನು ರಚಿಸಲಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಮೊದಲನೆಯ ಪ್ರಶ್ನೆಗೆ ಪ್ರತಿ ಗ್ರಾಮ ಪಂಚಾಯತಿಗೂ ಕೂಡ 40 ಮನೆಗಳ ಪ್ರಕಾರ ಕೊಟ್ಟಿದ್ದಾರೆ. ಆದರೆ ಆ ಪಂಚಾಯತಿ ವ್ಯಾಪ್ತಿಯಲ್ಲಿ ನೀವು ಸರ್ವೆ ಮಾಡಿರುವ ಪ್ರಕಾರ Houseless and Site less ಎಷ್ಟು ಇದ್ದಾರೆ ಎಂಬ ಮಾಹಿತಿ ಇದುವರೆಗೂ ಕೂಡ ಗ್ರಾಮ ಪಂಚಾಯತಿಗಳ ಹತ್ತಿರ ಇಲ್ಲ, ಹಾಗಾಗಿ ನೀವು ಕೊಟ್ಟಿರತಕ್ಕ 40 ಮನೆಗಳು ಏನಾಗಿದೆ ಎಂದರೆ, ಅದು ಯಾವುದಕ್ಕೂ ಸಾಕಾಗುತ್ತಿಲ್ಲ. ಒಂದೊಂದು ಗ್ರಾಮಪಂಚಾಯತಿ ವ್ಯಾಪ್ತಿಗೆ ಸರಿಸುಮಾರು 15 ರಿಂದ 17 ಹಳ್ಳಿಗಳು ಬರುತ್ತವೆ. ಅಂದರೆ ನಿವೇಶನ ಮತ್ತು ಮನೆ, ಒಂದೊಂದು ಹಳ್ಳಿಗೆ ಎರಡು ಮನೆಗಳನ್ನೂ ಸಹ ಕೊಡಲು ಆಗುತ್ತಿಲ್ಲ. ಇದು ನಿಮ್ಮ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಈ ಸಮಸ್ಯೆಯನ್ನು ಪರಿಹಾರ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆ ಪ್ರಶ್ನೆಗೆ ಗ್ರಾಮ ಪಂಚಾಯತಿ ಕಾಯ್ದೆಗೆ ತಿದ್ದುಪಡಿ ತಂದು ಮಾಡಿದ್ದೇವೆಂದು ಹೇಳಿದ್ದೀರಿ. ಸಂತೋಷ. ಅದಕ್ಕೆ ನಮ್ಮದೇನು ವಿರೋಧವಿಲ್ಲ. ಆದರೆ ಈಗ ಗ್ರಾಮ ಪಂಚಾಯತಿಗೆ ಅಧಿಕಾರ ಕೊಟ್ಟು ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂಬುದು ಕಾಯ್ದೆಯಲ್ಲಿ ಇರತಕ್ಕದ್ದು. ಇದು ತಿದ್ದುಪಡಿಯಾಗಿರತಕ್ಕ ಕಾಯ್ದೆ. ಆದರೆ ನನ್ನ ಗಮನಕ್ಕೆ ಬಂದಿರತಕ್ಕ ರೀತಿಯಲ್ಲಿ ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಿಲ್ಲ. ನಡೆಯುತ್ತಿರುವಂಥ ಗ್ರಾಮಸಭೆಗಳೂ ಸಹ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಅಪ್ಲಿಕೇಷನ್ ತೆಗೆದುಕೊಳ್ಳುತ್ತಾರೆ, ಬ್ಲಾಂಕ್ ಆಗಿ ಹಾಗೆಯೇ ತೆಗೆದುಕೊಂಡು ಬಂದುಬಿಡುತ್ತಾರೆ. ಪಂಚಾಯತಿ Office ನಲ್ಲಿ ಕುಳಿತುಕೊಂಡು ಒಬ್ಬೊಬ್ಬರು ಮೆಂಬರ್‌ಗೆ ಎರಡೆರಡು ಎಂದು ಭಾಗ ಇಟ್ಟುಕೊಳ್ಳುತ್ತಿದ್ದಾರೆ. ಇದು ವಾಸ್ತವ ಪರಿಸ್ಥಿತಿ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ನಿಮ್ಮ ಹತ್ತಿರ ಇದೆಯೆ? ಇಲ್ಲದಿದ್ದರೆ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡಬೇಕು. ನ್ಯಾಯವಾಗಿ ಬಡವರಿಗೆ ಸಿಗಬೇಕು ಎಂಬ ಉದ್ದೇಶವನ್ನೇನು ಇಟ್ಟುಕೊಂಡು ತಿದ್ದುಪಡಿ

ತಂದಿರಿ ಆ ಉದ್ದೇಶ ವಿಫಲವಾಗುತ್ತಿದೆ. ನಾವು ಈ ವಿಚಾರದಲ್ಲಿ ಈ ವಿಧಾನಸಭೆಯಲ್ಲಿ ಚರ್ಚೆ ಮಾಡುವಾಗ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು ತಾತ್ವಿಕವಾಗಿ ಹೇಳಲು ಚೆನ್ನಾಗಿರುತ್ತದೆ. ಆದರೆ ಆಯ್ಕೆ ಮಾಡತಕ್ಕ ಪ್ರಕ್ರಿಯೆ ಮತ್ತು ವಿಧಾನ ಸಮರ್ಪಕವಾಗಿ ಆಗದೆಯೆ ಯಥಾಪ್ರಕಾರ ಗ್ರಾಮಪಂಚಾಯತಿಗೆ ಬಂದು ಸದಸ್ಯರೇ ಭಾಗ ಇಟ್ಟುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೂರನೆಯದಾಗಿ, ನಗರ ಪ್ರದೇಶದ ಸಂಬಂಧಪಟ್ಟ ಆಶ್ರಯ ಸಮಿತಿಗಳನ್ನು ರಚಿಸಲಾಗುತ್ತದೆ ಎಂದು ಹೇಳಿದ್ದಾರೆ. ಈ ವರ್ಷ ಜನವರಿ ತಿಂಗಳ ಮೊದಲ ವಾರದಲ್ಲಿ ನಗರ ಪ್ರದೇಶದ ಆಶ್ರಯ ಸಮಿತಿಗಳನ್ನು ರಚನೆ ಮಾಡಿ ನಮಗೆ ಸುತ್ತೋಲೆಯನ್ನು ಕಳುಹಿಸಿದ್ದಾರೆ. ಆ ಸುತ್ತೋಲೆ ಕಳುಹಿಸಿದ ಒಂದು ವಾರದಲ್ಲಿ 250 ಮನೆಗಳನ್ನು ನಗರ ಪ್ರದೇಶಗಳಿಗೆ ಕೊಡುತ್ತಿದ್ದೇವೆ. ತಕ್ಷಣ ನಿಮ್ಮ ಆಶ್ರಯ ಸಮಿತಿ ಸೇರಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಮತ್ತೊಂದು ಸುತ್ತೋಲೆ ಬಂದಿದೆ. ನಾವು ಅದರ ಪ್ರಕಾರ ಸಭೆ ಸೇರಿ ಫಲಾನುಭವಿಗಳನ್ನು ಆಯ್ಕೆ ಮಾಡಿ ನಿವೇಶನಗಳನ್ನು ಮನೆಗಳನ್ನು ಹಂಚಿದ್ದೇವೆ. ಈ ತಿಂಗಳ ಮೊದಲ ವಾರದಲ್ಲಿ ಒಂದು ಸುತ್ತೋಲೆ ಬರುತ್ತದೆ. ಆ ಸಮಿತಿಗಳನ್ನು ರದ್ದು ಮಾಡಿದ್ದೇವೆಂದು. ಜನವರಿಯಲ್ಲಿ ಬಂದಿರತಕ್ಕ ಸುತ್ತೋಲೆಯ ಆಧಾರದ ಮೇಲೆ ನಾವು ಸಭೆ ಸೇರಿ ಫಲಾನುಭವಿಗಳನ್ನು ಗುರುತಿಸಿದ್ದೇವೆ. ಅದರ ಪರಿಸ್ಥಿತಿ ಏನು? ಈಗ ಮತ್ತೆ ಈ ತಿಂಗಳಿನಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿ ಆ ಸಮಿತಿಗಳನ್ನು ರದ್ದು ಮಾಡುತ್ತೇವೆಂದು ಹೇಳಿದ್ದೀರಿ. ಇದರ ಪರಿಸ್ಥಿತಿಯೇನು ಎಂಬ ಬಗ್ಗೆ ಸರ್ಕಾರ ಸಮರ್ಪಕವಾಗಿ ಉತ್ತರ ಕೊಡಬೇಕು.

ಶ್ರೀ ಡಿ.ಟಿ.ಜಯಕುಮಾರ್ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಕೇಳಿರತಕ್ಕ ಪ್ರಶ್ನೆಯಲ್ಲಿ ಸತ್ಯವಿದೆ. ಏಕೆಂದರೆ, ಇಡೀ ಕರ್ನಾಟಕದಾದ್ಯಂತ ಕಡುಬಡವರಿಗೆ, ಯಾರು ತುಂಬಾ ಬಡವರಿದ್ದಾರೆ. ದೀನದಲಿತರಿಗೆ ಅವರಿಗೆಲ್ಲಾ ಮನೆಗಳ ಅವಶ್ಯಕತೆ ಇದೆ. ನಾವು ಮೂರು ಮಟ್ಟದಲ್ಲಿ ಮನೆಗಳನ್ನು ಕೊಡುತ್ತಿದ್ದೇವೆ. ಒಂದು ಆಶ್ರಯ ಮನೆ, ಇನ್ನೊಂದು ಅಂಬೇಡ್ಕರ್ ಮನೆ ಮತ್ತೊಂದು ಇಂದಿರಾ ಅವಾಸ್ ಮನೆ. ಈ ಮೂರು ಮನೆಗಳನ್ನು ಕೂಡ ನಿಯಂತ್ರಣ ಮಾಡುವುದಕ್ಕೆ ಮತ್ತು ಸರಿಯಾದ ಮಟ್ಟದಲ್ಲಿ ಮಾಡಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಎಂದು ಹಿಂದೆ ಏನು ಆಶ್ರಯ ಸಮಿತಿ ಇತ್ತೊ ಅದರ ಬದಲಾಗಿ ಗ್ರಾಮೀಣ ಮಟ್ಟದಲ್ಲಿ ಇದ್ದ ಪಂಚಾಯತ್‌ರಾಜ್ ಅಧಿನಿಯಮ 1993 ಪ್ರಕರಣ 61(ಎ) ಪ್ರಕಾರ ಪ್ರತ್ಯೇಕವಾದಂಥ ವಸತಿ ಸಮಿತಿಯನ್ನು ನೇಮಿಸಲಾಗಿದೆ. ಈ ರೀತಿ

ನೇಮಿಸಿರುವಂಥ ಸಮಿತಿಯ ಕಾರ್ಯವೈಖರಿಗಳೇನು? ಅದನ್ನು ಯಾವ ರೀತಿ ಪಾಲಿಸಬೇಕು ಎಂಬ ಬಗ್ಗೆ ಸುತ್ತೋಲೆಯನ್ನೂ ಸಹ ನಾವು ಹೊರಡಿಸಿದ್ದೇವೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರುವುದರಲ್ಲಿ ಅರ್ಥವಿದೆ. ಏಕೆಂದರೆ, ಯಾವುದೇ ಗ್ರಾಮಸಭೆಯಲ್ಲಿ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಅರ್ಜಿಗಳನ್ನು ಸ್ವೀಕಾರ ಮಾಡುವಂಥ ಸಂದರ್ಭದಲ್ಲಿ ತಪ್ಪುಗಳಾಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಅವ್ಯವಹಾರಗಳಾಗುತ್ತಿದೆ. ನನಗೆ ಬಂದಿರತಕ್ಕ ದೂರು ಏನೆಂದರೆ, ನಾವೇನು ಮೊದಲಬಾರಿಗೆ 40 ಮನೆಗಳನ್ನು ಕೊಟ್ಟಿದ್ದೇವೆ. ಅಲ್ಲಿ 20 ಜನ ಸದಸ್ಯರುಗಳಿದ್ದರೆ ಎಲ್ಲರು ಎರಡೆರಡು ಮನೆಗಳನ್ನು ಹಂಚಿಕೊಂಡುಬಿಡುವುದು. ಅಲ್ಲಿ ಅವ್ಯವಹಾರಗಳಾಗಿ ಎರಡೆರಡು ಮನೆಗಳನ್ನು ಹಂಚಿಕೊಳ್ಳುವುದರ ಜೊತೆಗೆ ಅವರ ನೆಂಟರು. ಬಂಧುಬಳಗ, ಸ್ನೇಹಿತರು ಇವರಿಗೆ ಕೊಟ್ಟುಕೊಂಡಿದ್ದಾರೆ. ನಿಜವಾದಂಥ ಫಲಾನುಭವಿಗಳಿಗೆ, ಯಾರು ಅರ್ಹರಿದ್ದಾರೆ ಅವರಿಗೆ ಕೊಡುತ್ತಿಲ್ಲ. ಆದ್ದರಿಂದ ಈವತ್ತು ಕಾನೂನು ಪ್ರಕಾರದ ಅವಕಾಶವಿದೆ. ಗ್ರಾಮಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗೆ ಹೊಣೆಗಾರರನ್ನಾಗಿ ಮಾಡಿ ಜವಾಬ್ದಾರಿಯನ್ನಾಗಿ ಮಾಡಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವುದರ ಮೂಲಕ ಈ ರೀತಿ ಅವ್ಯವಹಾರಗಳಿಗೆ ತಡೆಹಾಕಬೇಕು. ನಿಯಂತ್ರಣ ಮಾಡಬೇಕು ಎನ್ನತಕ್ಕ ಉದ್ದೇಶವಿದೆ.

ಶ್ರೀ ವಾಟಾಳ್ ನಾಗರಾಜ್: ಕ್ರಿಮಿನಲ್ ಮೊಕದ್ದಮೆಯನ್ನು ಯಾವ ಕಾನೂನಿನ ಪ್ರಕಾರ ತರಲು ಆಗುತ್ತದೆ?

ಶ್ರೀ ಡಿ.ಟಿ.ಜಯಕುಮಾರ್: ಚೀಟಿಂಗ್ ದಿ ಗೌರ್ನಮೆಂಟ್ ಎಂದು.

ಶ್ರೀ ವಾಟಾಳ್ ನಾಗರಾಜ್: ಕಾನೂನಿನ ಚೌಕಟ್ಟಿನಲ್ಲಿ ಹೇಳಿ ತಾವು?

SRI D.T.JAYA KUMAR: It is nothing, but Cheating the Government. ಅವರು ಯಾರು ಅರ್ಹರಿದ್ದಾರೆ ಅವರಿಗೆ ಮಾತ್ರ ಕೊಡಬೇಕು. ನಮ್ಮ ಕಡೆ ಕೆಲವರು ಪಂಪ್‌ಸೆಟ್ ಇಟ್ಟುಕೊಂಡಿದ್ದಾರೆ. ಹತ್ತು ಅಂಕಣ ಮನೆ ಇದೆ. ಆಶ್ರಯ ಮನೆಯ ಈ ಯೋಜನೆಯಲ್ಲಿ ಅವನು ಫಲಾನುಭವಿಯಾಗಿ ಆಯ್ಕೆಯಾಗಿದ್ದಾರೆ. ಅಂಥದ್ದರಲ್ಲಿ He is nothing but Cheating the Government. ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ ಸಾಕು. ಇದೇನೂ ಬೇಕಾಗಿಲ್ಲ.

ಶ್ರೀ ಡಿ.ಟಿ.ಜಯಕುಮಾರ್: ಇದು ಎರಡು ವರ್ಷದಿಂದ ಗೊಂದಲವಿತ್ತು. ಆಶ್ರಯ ಸಮಿತಿಗಳನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕು ಎನ್ನತಕ್ಕದ್ದು ಈ ಹಳೆಯ ಪದ್ಧತಿಯನ್ನು continue ಮಾಡಬೇಕು ಎನ್ನುವ

ವಿಚಾರದಲ್ಲಿ ಇಲ್ಲಿ ಪಕ್ಷಬೇಧವಿಲ್ಲದೆ ಎಲ್ಲಾ ಶಾಸಕರೂ ಕೂಡ ನಮ್ಮ ಅಧ್ಯಕ್ಷತೆಯಲ್ಲಿ ಮಾಡಬೇಕೆಂದು ಪ್ರಸ್ತಾವನೆಯನ್ನು ಮಾಡಿ ಎರಡು ವರ್ಷದಿಂದ ನೆನೆಗುದಿಗೆ ಬಿದ್ದಿತ್ತು. ಮುಂದೆ ಅದನ್ನು ಪರಿಶೀಲನೆ ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗಳನ್ನು ಮಡತಕ್ಕ ಉದ್ದೇಶ ಸಹ ಸರ್ಕಾರದ ಗಮನದಲ್ಲಿದೆ. ಅದನ್ನು ಸಚಿವಸಂಪುಟದಲ್ಲಿ ತಂದು ಅಲ್ಲಿ ಒಪ್ಪಿಗೆಯಾದರೆ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗಳನ್ನು ಮಾಡಬೇಕು ಎಂಬ ಉದ್ದೇಶ ಕೂಡ ಸರ್ಕಾರಕ್ಕಿದೆ.

ಶ್ರೀ ವಿ.ಸೋಮಣ್ಣ: ನಗರ ಪ್ರದೇಶಕ್ಕೂ ಆ ರೀತಿ ಮಾಡುತ್ತಿರಾ?

ಶ್ರೀ ಎ.ತನ್ವೀರ್‌ಸೇಠ್: ನಗರ ಪ್ರದೇಶಗಳ ಆಶ್ರಯ ಸಮಿತಿಗಳನ್ನು ಯಾವಾಗ ರಚನೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಕೆ.ಜಯಕುಮಾರ್ ಹೆಗ್ಡೆ: ಇಂದಿರಾಅವಾಜ್ ಮನೆಗಳನ್ನು ಕೊಡುವಂಥದ್ದು ನಿಮ್ಮ ಹೌಸಿಂಗ್ ಕಾರ್ಪೋರೇಷನ್‌ನಿಂದ ಕೆಲವೇ ಪಂಚಾಯತಿಗಳಿಗೆ ಕಳುಹಿಸಿದ್ದಾರೆ. ಅದನ್ನು ಮಾಡಬಾರದು. ಎಲ್ಲಾ ಪಂಚಾಯತಿಗಳಿಗೆ Equal Distribute ಆಗಬೇಕಾಗುತ್ತದೆ. ಇಲ್ಲಿ ಕುಳಿತುಕೊಂಡು ಅವರು ಇತ್ಯರ್ಥ ಮಾಡುವುದಿಲ್ಲ. ಇಂದಿರಾಅವಾಜ್ ಅಂಬೇಡ್ಕರ್ ಮನೆಗಳಿಗೆ ಆರ್.ಟಿ.ಸಿ. ಇಲ್ಲದೆಯೇ ಕೊಡುತ್ತಿಲ್ಲ. ಇಂದಿರಾ ಅವಾಜ್ ಪ್ರಾರಂಭ ಮಾಡಿದ್ದೇ ಯಾರಿಗೆ ಸ್ವಂತ ಜಾಗವಿರುವುದಿಲ್ಲ ಅವರಿಗೆ ಕೊಡಬೇಕೆಂದು ಇದರಿಂದ ಎಸ್.ಸಿ ಮತ್ತು ಎಸ್.ಟಿ.ಯವರಿಗೆ ಬಹಳ ತೊಂದರೆಯಾಗುತ್ತದೆ. ಅವರಿಗೆ ಆರ್.ಟಿ.ಸಿ. ಇಲ್ಲ ನೀವು ಅವರಿಗೆ ನಿವೇಶನ ಕೊಡುತ್ತೀರಿ. ಆದರೆ ಅವರು ಮನೆ ಕಟ್ಟಿಕೊಳ್ಳಲು ಆಗುವುದಿಲ್ಲ. ಆ ಪರಿಸ್ಥಿತಿ ಇದೆ. ಆದ್ದರಿಂದ ಮೊದಲು ಇದ್ದ ವ್ಯವಸ್ಥೆಯನ್ನೆ ತರಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಮಗೂ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಗೆ ಕೊಟ್ಟಿದ್ದನ್ನು ವಾಪಸ್ ತೆಗೆದುಕೊಳ್ಳಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದು ಸರಿಯಲ್ಲ

ಶ್ರೀ ಕೆ.ಗೋಪಾಲ ಪೂಜಾರಿ: ಆರ್.ಟಿ.ಸಿ. ಇಲ್ಲದಿರುವುದರಿಂದ ಬಹಳಷ್ಟು ಪಂಚಾಯತಿಗಳಲ್ಲಿ ಎಸ್.ಸಿ/ಎಸ್.ಟಿ ಗೆ ಕೊಡತಕ್ಕ ಮನೆಯನ್ನು ಕೊಡಲು ಆಗುತ್ತಿಲ್ಲ. ಆದ್ದರಿಂದ ಅದನ್ನು ಸಾಮಾನ್ಯ ರೀತಿಯಲ್ಲಿ ಕೊಡಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಆದ್ದರಿಂದ ಎಸ್.ಸಿ./ಎಸ್.ಟಿ. ಗೆ ಆರ್.ಟಿ.ಸಿ ಇಲ್ಲದೆಯೇ ಮನೆ ಕೊಡಲು ಅವಕಾಶ ಕಲ್ಪಿಸಿಕೊಡಬೇಕು.

ಶ್ರೀ ಎ.ತನ್ವೀರ್ ಸೇಠ್: ಆಶ್ರಯ ವಿಚಾರದಲ್ಲಿ ಈಗಾಗಲೇ ಸದನದಲ್ಲಿ ಅನೇಕಬಾರಿ ಚರ್ಚೆಯಾಗಿದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಅನೇಕ ರೀತಿಯ ಅವ್ಯವಹಾರಗಳು ಗ್ರಾಮಪಂಚಾಯತಿ ಮಟ್ಟದಲ್ಲಿ ಆಗಿದೆ ಎಂದು ಅವರಾಗಿಯೇ ಹೇಳಿದ್ದಾರೆ.

ಶ್ರೀ ಎ.ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಆಶ್ರಯ ವಿಚಾರದಲ್ಲಿ ಈಗಾಗಲೇ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿಯೇ ಅನೇಕ ರೀತಿಯ ಅವ್ಯವಹಾರಗಳು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಡೆದಿದೆ ಎನ್ನುವುದನ್ನು ಅವರಾಗಿಯೇ ಅವರು ಹೇಳಿದ್ದಾರೆ. ಈಗ ಈ ಹಿಂದೆ ರಚನೆಯಾಗಿದ್ದ ನಗರ ಪ್ರದೇಶಗಳ ಆಶ್ರಯ ಸಮಿತಿಗಳನ್ನು ರದ್ದು ಮಾಡುವಂತಹ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ. ಆಶ್ರಯ ಮನೆಗಳ ವಿಚಾರದಲ್ಲಿ ನನಗನಿಸುತ್ತದೆ, ಒಂದರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ ಕೆಲವೊಂದು ಭಾಗಗಳಲ್ಲಿ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರೂ, ಸರ್ಕಾರ ಹಣ ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ ಅನೇಕ ರೀತಿಯ ತಾರತಮ್ಯವನ್ನು ಮಾಡಿದೆ. ನಿವೇಶನಗಳನ್ನು ನಾವು ಪಡೆಯಬೇಕಾದರೂ, ಸಮಯಕ್ಕೆ ಹಣ ಬಿಡುಗಡೆ ಮಾಡದೆ ಅನೇಕ ರೀತಿಯ ತೊಂದರೆಗಳಾಗಿದೆ. ಈ ಕಾರಣಕ್ಕಾಗಿ ಸರ್ಕಾರದಿಂದ ಸಚಿವರು ಸ್ವತಃ ಇದರಲ್ಲಿ ಅನೇಕ ರೀತಿಯ ಅವ್ಯವಹಾರಗಳಾಗಿದೆ ಎಂದು ಅವರಾಗಿಯೇ ಅವರು ಹೇಳಿರುವುದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನನ್ನ ವಿನಂತಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳಲಿಕ್ಕೆ ಅವಕಾಶವಾಗುವುದಿಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಹಿಂದೆ ಇರುವವರಿಗೆ ಅವಕಾಶವನ್ನೇ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಗೋಪಾಲ ಪೂಜಾರಿಯವರೆ, ದಯವಿಟ್ಟು ಕುಳಿತುಕೊಳ್ಳಿ. ತಾವು ಮತ್ತೆ ಮತ್ತೆ ಏಕೆ ನಿಂತುಕೊಂಡು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಧ್ರುವನಾರಾಯಣರವರೆ, ತಾವು ಮಾತನಾಡಿ. ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್.ಧ್ರುವ ನಾರಾಯಣ (ಸಂತೇಮಾರನಹಳ್ಳಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರತಿ ಗ್ರಾಮ ಪಂಚಾಯತಿಗೂ 40–40 ಮನೆಗಳನ್ನು ವಿತರಣೆ ಮಾಡಿದ್ದೀರಿ. ಅದರ ಬಗ್ಗೆ ಈಗಾಗಲೇ ಗ್ರಾಮ ಸಭೆಗಳೂ ಕೂಡ ನಡೆದಿವೆ ಮತ್ತು ಅವುಗಳ Registration ಕೂಡ ನಡೆಯುತ್ತಿದೆ. ಗ್ರಾಮ ಸಭೆಗಳು ಸಮರ್ಪಕವಾಗಿ ನಡೆದಿಲ್ಲವೆಂದು ಈಗಾಗಲೇ ಹಲವಾರು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈಗಾಗಲೇ ಕೊಟ್ಟಿರತಕ್ಕಂಥ 40 ಮನೆಗಳ Registration ನಡೆಯುತ್ತಿದೆ. ದಯಮಾಡಿ ಅದನನು ನಿಲ್ಲಿಸಿ. ತಾವು ಆಗಲೇ ಹೇಳಿದಂತೆ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈ ಅಧಿವೇಶನದಲ್ಲೇ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮತ್ತೆ ಆಶ್ರಯ ಸಮಿತಿ ಮಾಡಿ, ಮತ್ತೆ ನೀವು ಶಾಸಕರಿಗೆ ಅಧಿಕಾರ ಕೊಡುವುದು, ಇದು ಅಧಿಕಾರ ವಿಕೇಂದ್ರೀಕರಣಕ್ಕೆ ವಿರುದ್ಧವಾಗಿರುವಂತಾದ್ದು ಆಗಿದೆ. ಮಾನ್ಯ ಅಧ್ಯಕ್ಷರೆ, ಯಾರು ಏನೇ ಹೇಳಲಿ, ನಾವು ಒಂದು ಸಾರಿ ಇದರ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ಕೊಟ್ಟಿದ್ದೇವೆ. ಅಲ್ಲಿ ವ್ಯವಸ್ಥೆ ಸರಿ ಇಲ್ಲ ಎನ್ನುವುದಾದರೆ ಆ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥ ಕೆಲಸವಾಗಬೇಕು. ನಾವು ಅಧಿಕಾರ ವಿಕೇಂದ್ರಿಕರಣ...

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಅವರು ತಮ್ಮ ಅಭಿಪ್ರಾಯ ಹೇಳಲಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ನನಗೆ ರಕ್ಷಣೆ ಕೊಡಬೇಕು. ಏಕೆಂದರೆ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಸಂಪೂರ್ಣವಾದಂತಹ ಹಕ್ಕಿದೆ. ಬೇರೆ ಶಾಸಕರೂ ಸಹ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಲಿ. ಸರ್ಕಾರ ಏನೇ ನಿರ್ಧಾರ ತೆಗೆದುಕೊಳ್ಳಲಿ. ಅಧ್ಯಕ್ಷರೆ, ಇವತ್ತು ಈ ಸರ್ಕಾರ ಒಂದು ವೇಳೆ ಪಂಚಾಯತ್ ರಾಜ್ ವ್ಯವಸ್ಥೆ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ, ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ 90 ಸಾವಿರ ಗ್ರಾಮ ಪಂಚಾಯತಿ ಸದಸ್ಯರು ಈ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಾರೆ ಎಂದು ಹೇಳಬೇಕಾಗುತ್ತದೆ...

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಸಮಗ್ರವಾಗಿ ಎಲ್ಲವನ್ನೂ ಹೇಳುತ್ತಾರೆ.

(ಗೊಂದಲ)

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಿಂದ ಏನು ಆಶ್ರಯ ಸಮಿತಿ ತಾಲ್ಲೂಕು ಮಟ್ಟದಲ್ಲಿತ್ತೋ, ಅದು ಗ್ರಾಮ ಪಂಚಾಯತಿ ಮಟ್ಟಕ್ಕೆ ಹೋಯಿತು. ಇವತ್ತು ಜನರೇ ಅದನ್ನು ಒಪ್ಪಿಕೊಳ್ಳುವುದಕ್ಕೆ ರೆಡಿ ಇಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ಕೊಡಬೇಕು ಎನ್ನುವಂತಹ ಭಾವನೆ ಇದೆ. ಯಾವುದನ್ನು ಅಧಿಕಾರ ವಿಕೇಂದ್ರೀಕರಣ ಮಾಡಬೇಕೋ ಅದನ್ನು ಮಾಡಬೇಕೇ ಹೊರತು. ಆಗದೇ ಇದ್ದುದ್ದನ್ನೆಲ್ಲಾ ಇವತ್ತು ಗ್ರಾಮ ಪಂಚಾಯತಿಗೆ ವ್ಯವಸ್ಥೆಗೆ ಕೊಡಬಾರದು. ಕೊಟ್ಟಿರುವ ಹಣವನ್ನು ನೀವು ಖರ್ಚು ಮಾಡಿದ್ದೀರಾ? ಅದರ ಬಗ್ಗೆ ವಿಚಾರ ಮಾಡಿದ್ದೀರಾ? ಇವತ್ತು ಕುಡಿಯುವ ನೀರಿನದು ಕೋಟ್ಯಾಂತರ ರೂಪಾಯಿಗಳ ಹಣ ಇದೆ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಕೊಟ್ಟಂತಹ ಹಣ ಇವತ್ತು ಕೋಟ್ಯಾಂತರ ರೂಪಾಯಿಗಳಿದೆ. ಟೆಂಡರ್ ಕರೆಯಲಿಕ್ಕೆ ಬರುತ್ತಿಲ್ಲ. ಅಲ್ಲಿ ವ್ಯವಸ್ಥೆ ಇಲ್ಲ. ವ್ಯವಸ್ಥೆಯನ್ನು ಸರಿ ಮಾಡಿದ ನಂತರ ಅಧಿಕಾರ ವಿಕೇಂದ್ರಕರಣಕ್ಕೆ ಅರ್ಥ ಬರುತ್ತದೆಯೇ ಹೊರತು ವ್ಯವಸ್ಥೆಯನ್ನು ಸರಿ ಮಾಡದೆ ಅಧಿಕಾರ ಕೊಟ್ಟರೆ ಸರಿಯಾಗುವುದಿಲ್ಲ. ಯಾವ ಗ್ರಾಮ ಪಂಚಾಯತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಯಾಗಿ ಮಾಡಿದ್ದಾರೆಂದು ಇವತ್ತು ಸನ್ಮಾನ್ಯ ಸಚಿವರಾದ ಉದಾಸಿಯವರು ಹೇಳಲಿ. ಅದರಿಂದ ಆ ಭಾಗದ ಕುರುಡು method ಇದೆಯಲ್ಲಾ ದಯವಿಟ್ಟು ಅದರ ವಿಚಾರ ಬಿಡಿ. ಯಾವತ್ತು ಸರ್ಕಾರದವರು ಸಮಸ್ಯೆಯನ್ನು ಸರಿ ಮಾಡುತ್ತಾರೋ, ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೋ, ಆ ತೀರ್ಮಾನಕ್ಕೆ ಬದ್ದರಾದಾಗ ಗ್ರಾಮ ಪಂಚಾಯತಿಗೆ ಕೊಡುವಂತಹ ವ್ಯವಸ್ಥೆ ಮಾಡೋಣ. ಇವತ್ತು ವಾಸ್ತವವಾಗಿ ಶಾಸಕರನ್ನು ಬಂದು ಕೇಳುತ್ತಾರೆ. ನೀವೇನು ಅಧಿಕಾರ ವಿಕೇಂದ್ರಕರಣ ಮಾಡಿ ಗ್ರಾಮ ಪಂಚಾಯತಿಗಳಿಗೆ ಆಶ್ರಯ ಮನೆಗಳನ್ನು ಹಂಚಲಿಕ್ಕೆ ಅಧಿಕಾರ ಕೊಟ್ಟಿದ್ದರೂ ಕೂಡ, ಜನ ಶಾಸಕರನ್ನೇ ಕೇಳುತ್ತಾರೆ. ನಾನೂ ಕೂಡ ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿ ಕೆಲಸ ಮಾಡಿ ಬಂದಿದ್ದೇನೆ. ಆ ವ್ಯವಸ್ಥೆಗೂ ಈ ವ್ಯವಸ್ಥೆಗೂ ಬಹಳ ವ್ಯತ್ಯಾಸವಿದೆ. ಜಿಲ್ಲಾ ಪರಿಷತ್ತು ಅಧ್ಯಕ್ಷನಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಇದು ನನ್ನ ಗಮನಕ್ಕೆ ಬಂದಿದೆ.

ಅಧ್ಯಕ್ಷರು: ನಿಮ್ಮ ಅಭಿಪ್ರಾಯವನ್ನು ಏನು ಹೇಳಬೇಕೆಂದಿದ್ದೀರೋ ಅದನ್ನು ಹೇಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಜೆ.ಸಿ.,ಮಾಧುಸ್ವಾಮಿ: ನಾನು ಆಗಿನಿಂದ ಸುಮಾರು ಹತ್ತು ಸಲ ಮಾತನಾಡಲು ಎದ್ದು ನಿಂತೆ.

ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ತಾವೆಲ್ಲಿ ಹತ್ತು ಸಲ ಎದ್ದು ನಿಂತಿರಿ. ಮಾನ್ಯ ಅಧ್ಯಕ್ಷರೆ, ಡಾಕ್ಟರ್ ಶರಣ ಪ್ರಕಾಶ್ ಪಾಟೀಲ್‌ರವರು ಬಹಳಷ್ಟು ಸ್ಪಷ್ಟವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದಾರೆ. ನಾನೂ ಕೂಡ ಆ ಜಾಗದಲ್ಲಿ ಕುಳಿತಿದ್ದಾಗ, ಮಾನ್ಯ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲರೂ ಕೂಡ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಆಗ್ರಹಿಸಿದ್ದರು. ವ್ಯವಹಾರಿಕವಾಗಿ ಏನು ಆಗುತ್ತಿದೆ ಎಂಬುದನ್ನು ಎಲರೂ ಒಪ್ಪುತ್ತೇವೆ. ಮಾನ್ಯ ರಾಜೀವ್ ಗಾಂಧಿಯವರು ಈ ದೇಶದ ಪ್ರಧಾನಿಗಳಾದಾಗ, ಪ್ರಪ್ರಥಮ ಬಾರಿಗೆ ಸಂವಿಧಾನದ ತಿದ್ದುಪಡಿ ಮಾಡಿ, ಗ್ರಾಮ ಪಂಚಾಯತಿಗಳಿಗೆ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಅವರ ಕೈಯಲ್ಲೇ ಸರ್ಕಾರ ನಡೆಸತಕ್ಕ ಅಧಿಕಾರ ಕೊಡಬೇಕು ಎಂದಿದ್ದರು. ನಾನು ಮಾನ್ಯ ಕೃಷ್ಣಮೂರ್ತಿಯವರು ಹೇಳಿದಂತಹ ಕೆಲವೊಂದು ವಿಚಾರಗಳನ್ನು ವ್ಯಾವಹಾರಿಕವಾಗಿ ಒಪ್ಪುತ್ತೇನೆ. ಆದರೆ ಇವತ್ತು ಮಾನ್ಯ ರಾಜೀವ್ ಗಾಂಧಿಯವರು ಹೇಳಿದಂತೆ ಅಧಿಕಾರ ವಿಕೇಂದ್ರೀಕರಣ ಮಾಡಿದ ಮೇಲೆ, ಇವತ್ತು ರಾಜ್ಯದಲ್ಲಿ ಚುನಾವಣೆಯಾಗಿದೆ. ಇವತ್ತು ಈ ಸದನದಲ್ಲಿ ಬಹಳಷ್ಟು ಸಲ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪಿಸಿದ್ದಾರೆ ಹಾಗೂ ಬೇರೆಯವರೂ ಕೂಡ ಪ್ರಸ್ತಾಪಿಸಿದ್ದಾರೆ. ಆದರೆ ನಮ್ಮ Philosophy ಏನಿದೆ ಎಂದರೆ, ರಾಷ್ಟ್ರ ಮಟ್ಟದಲ್ಲಿ ಇವತ್ತು ಏನಾಗಿದೆ ಎಂದರೆ, ಪಂಚಾಯತ್ ರಾಜ್ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ಕರೆದಂತಹ ಸಭೆಯಲ್ಲಿ ನಾನು ಮುಖ್ಯಮಂತ್ರಿಯಾಗಿ Participate ಮಾಡತಕ್ಕಂಥ ಕಾಲದಲ್ಲಿ, ಆಗ ಬಳಿಗಾರ್‌ರವರು Principle Secretary ಆಗಿದ್ದರು, ಮಾನ್ಯ ಮಣಿಶಂಕರ್ ಆಯ್ಯರ್‌ರವರೂ ಕೂಡ ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಅನುಷ್ಠಾನವಾಗುತ್ತಿದೆ ಎಂದಿದ್ದರು. ಅದಕ್ಕೆ ನಾವು ಅವತ್ತು ಏನು ಮಾಡಿದೆವು ಎಂದರೆ, ಇವತ್ತು ಮನೆಗಳನ್ನು ಕೊಡತಕ್ಕಂಥದ್ದು ಕೊಟ್ಟರೆ ಅನಾಹುತವಾಗುತ್ತದೆ, ಶಾಸಕರ ಕೈಯಲ್ಲಿ ಇರಬೇಕು ಎಂಬ ದೃಷ್ಟಿಯಿಂದ ಸದನದಲ್ಲಿ ನಾವು Vigilance Committee ಎಂದು ಮಾಡಿದೆವು. ಎಲ್ಲಾ ಸಮಿತಿಗಳ ಮೇಲೆ ಈ Vigilance Committee ಯನ್ನು ನಾವು ಮಾಡಿದೆವು. ಇದು ಸದನಕ್ಕೆ ಬಿಟ್ಟಿದ್ದು

ಆಗತಕ್ಕಂಥ ವಿಚಾರಗಳನ್ನು ನಾನು ಹೇಳುತ್ತಿದ್ದೇನೆ. ಇವತ್ತು ನಮ್ಮ ಮುಖ್ಯ ಉದ್ದೇಶ ಏನಿದೆ, ಅದನ್ನು deviate ಮಾಡತಕ್ಕಂಥದ್ದು ಆಗಬಾರದು. ಇದರ ಬಗ್ಗೆ ಇವತ್ತು ಚರ್ಚೆಯಾಗಲಿ. ಚರ್ಚೆಯಾಗತಕ್ಕಂಥ ರೀತಿಯಲ್ಲಿ deviate ಮಾಡಿದರೆ, ನಾಳೆ ಕೂಡ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನೂ ಕೂಡ ಅವರು ಕೊಡಬಾರದು, ಇವೆಲ್ಲವೂ ಬರುತ್ತವೆ. ಅದಕ್ಕೆ ಎಲ್ಲಾ ಸಮಗ್ರವಾದಂತಹ ವಿಚಾರಗಳ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಬೇಕು. ಮಾತನಾಡಬೇಕು. ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರೂ ಕೂಡ ಹೋದ ಸದನದಲ್ಲಿ ಇವೆಲ್ಲಾ ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಏನೂ ಆಗಲಿಲ್ಲ. ಅದಕ್ಕೆ ನಾವು Vigilance Committee ಮಾಡಿದ್ದೆವು. ಮತ್ತೇನಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಆಶ್ರಯ ಸಮಿತಿ ಆಗಬೇಕೆಂದು ಸರ್ವ ಪಕ್ಷಗಳ ಮುಂದೆ ಒಪ್ಪಿಕೊಂಡಿದ್ದರು. ಇದು ಗ್ರಾಮ ಪಂಚಾಯತ್ ಲೆವಲ್‌ಗೂ ನಿಂತಿಲ್ಲ. ವಿಕೇಂದ್ರೀಕೃತ ವ್ಯವಸ್ಥೆ ಕೆಳಗಡೆ ಅರಾಜಕತೆ ಆಗಿ ಬಿಟ್ಟಿದೆ. ಗ್ರಾಮ ಸಭೆ ಹೆಸರಿನಲ್ಲಿ ಯಾರೋ ಬೇಕಾದವರು ಬರೆಸಿಕೊಂಡು ಹೋಗುವುದು, ಯಾರೋ ಬೇಕಾದವರು ಬರೆಯುವುದಿಲ್ಲ, ಮನೆ ಇದೆಯೋ ಇಲ್ಲವೋ ಕೇಳುವವರು ಇಲ್ಲ, ಸೈಟು ಇದೆಯೋ ಇಲ್ಲವೋ ಕೇಳುವಂತಿಲ್ಲ, ಯಾರದೋ ಮನೆ ಬರೆಸುತ್ತಿದ್ದಾರೆ, ಅವರಿಗೆ ನಿವೇಶನವೇ ಇರುವುದಿಲ್ಲ. ಎಲ್ಲಿ Scheduled Caste Beneficiary ಅನ್ನು ಆಯ್ಕೆ ಮಾಡಬೇಕಾಗಿದೆಯೋ ಅಲ್ಲಿ ನಿವೇಶನ ಇಲ್ಲವೆಂದು ಒಂದೊಂದು ಪಂಚಾಯತ್‌ನಲ್ಲಿ 10–15 ಮನೆಗಳು ಉಳಿದು ಹೋಗುತ್ತಿರುವುದು. ಅದನ್ನು divert ಮಾಡುವ ಅಧಿಕಾರ ಯಾರಿಗೂ ಇಲ್ಲ, ಸೈಟು ಕೊಂಡುಕೊಂಡು ಯಾರಿಗಾದರೂ ಸೈಟು ಕೊಟ್ಟು ಮನೆ ಕೊಡಬೇಕು ಎನ್ನುವಂತಹ ಅಧಿಕಾರ ಇವತ್ತು ಪಂಚಾಯಿತಿಗಳಿಗೆ ಕೊಟ್ಟಿಲ್ಲ. ಇದೆಲ್ಲಾ ಮಾಡಿದ್ದು ಏಕೆಂದರೆ, ನಾನು 3 ಲಕ್ಷ ರೂಪಾಯಿಗಳನ್ನು ಕೊಟ್ಟೆ, 4 ಲಕ್ಷ ರೂಪಾಯಿಗಳನ್ನು ಕೊಟ್ಟೆ, ಮನೆ ಕೊಟ್ಟೆ ಎಂದು ಭಾಷಣ ಮಾಡಿ, ಅಲ್ಲೇನೂ ಆಗದಂತೆ ನೋಡಿಕೊಳ್ಳುವುದಕ್ಕೋಸ್ಕರ ಮಾಡಿದ ವ್ಯವಸ್ಥೆ ಇದು. ಪಂಚಾಯತಿಯವರಿಗೆ ಅಧಿಕಾರ ಇವತ್ತು ಇಲ್ಲ. ಗ್ರಾಮ ಪಂಚಾಯತಿಯಲ್ಲಿ ಕುಳಿತುಕೊಂಡು resolution ಮಾಡಿ, ಒಂದು ಪಂಚಾಯತಿಗೆ ಕೊಡುವ ಅಧಿಕಾರ ಇಟ್ಟಿದ್ದೀರಾ? ಇಡೀ ಗ್ರಾಮ ಪಂಚಾಯತ್ ವ್ಯವಸ್ಥೆ ವಿಕೇಂದ್ರೀಕೃತ

ವ್ಯವಸ್ಥೆಯೊಳಗೆ ನಾಶವಾಗಿದೆ. ಇವತ್ತು ಒಂದು civil ಕಾಮಗಾರಿ ಮಾಡುವಂತಿಲ್ಲ. ಮಾನ್ಯ ಉದಾಸಿಯವರು ಹೇಳಲಿ. ಅಲ್ಲಿ ಊರಿಗೊಂದು ಕಮಿಟಿ ಮಾಡಬೇಕಂತೆ. ಅಲ್ಲಿ 12 ಜನ ಸದಸ್ಯರು ನೋಡಿ ಒಪ್ಪಿದ ಮೇಲೆ ಬಿಲ್ ಪಾಸ್ ಮಾಡಬೇಕೆಂತೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಸಾರ್? ಇಂಜಿನಿಯರ್‌ಗಳು ಏಕೆ? ಪಂಚಾಯತಿಗಳು ಏಕೆ? TPS ಏಕೆ? ZP ಏಕೆ? ನಾವ್ಯಾಕೆ ಎಂಬುದೇ ಪ್ರಶ್ನೆಯಾಗಿದೆ. ಇವತ್ತು ಒಂದು ಸಿವಿಲ್ ಕಾಮಗಾರಿಯನ್ನು ನಿಮ್ಮ ಗ್ರಾಮದಲ್ಲಿ ಮಾಡಿದರೆ, ಅಲ್ಲಿ 12 ಜನರ ಒಂದು ಸಮಿತಿ ಮಾಡಿ, ಆ ಸಮಿತಿ ಸದಸ್ಯರು ಹೇಳಿದರೆ ಬಿಲ್ ಪಾಸ್ ಮಾಡಬೇಕು. ಇದು ವ್ಯವಸ್ಥೆನಾ? ಕಾನೂನಿನ ಕೆಳಗಡೆ ನಡೆಯಬೇಕಾಗಿದ್ದನ್ನೂ ತೆಗೆದುಕೊಂಡು ಹೋಗಿ ನೀವು ಚಾವಡಿ ಕೆಳಗಡೆ ಕುಳ್ಳಿರಿಸಿದ್ದೀರಿ. ಇವತ್ತು ಸಿವಿಲ್ ವರ್ಕ್ ಮಾಡಬೇಕಾದರೆ ಕಂಟ್ರಾಕ್ಟರ್ ಎಷ್ಟು ಹಂತಗಳಲ್ಲಿ ದುಡ್ಡು ಕೊಡಬೇಕು. ಗೊತ್ತೇ? ಯಾರ ಪುರಾಷಾರ್ಥಕ್ಕಾಗಿ ಇದೆಲ್ಲಾ ಆಗುತ್ತಿದೆ ಸಾರ್. ಇದರಲ್ಲಿ ದಯಮಾಡಿ ಯಾರೂ ಪ್ರತಿಷ್ಠೆ ಮಾಡಿಕೊಳ್ಳುವುದು ಬೇಕಾಗಿಲ್ಲ. ನಮಗೆಲ್ಲಾ ಯಾರಿಗೋ ಮನೆ ಕೊಟ್ಟುಬಿಟ್ಟು ಬಹಳ ದೊಡ್ಡ ಮನುಷ್ಯರು ಆಗಬೇಕು ಎಂದೇನೂ ಇಲ್ಲ. ಈಗೇನು ನೀವು Vigilance Committee ಎಂದು ಮಾಡಿ ನಮಗೇನು ಅಧಿಕಾರ ಕೊಟ್ಟಿರೋ, ಅದನ್ನು ಬಳಸಿ ತಡೆಯಲಿಕ್ಕೆ ಆದೇಶಿಸಿದೆವು. ಒಂದೊಂದು ತಾಲ್ಲೂಕಿನಲ್ಲಿ 7–9 ಗ್ರಾಮ ಪಂಚಾಯತಿಗಳಲ್ಲಿ ನಾವು ಸರಿಯಾಗಿ ಆಗಿಲ್ಲವೆಂದು ತಡೆದು ನಿಲ್ಲಿಸಿದ್ದೇವೆ. ಮುಂದಕ್ಕೆ ಏನು ಮಾಡಬೇಕು? ಕನಿಷ್ಟ ನೀವು ಆಶ್ರಯ ಸಮಿತಿ ಮಾಡುವವರು, ನೀವು ಆಶ್ರಯ ಸಮಿತಿ ಮಾಡಬೇಕು, ಇದು ಈ ಸದನದ ಒಕ್ಕೊರಲಿನ ಬೇಡಿಕೆ. ಅವರು ಯಾವುದೋ ಒಂದು ಪ್ರತಿಷ್ಠೆಗೆ, ಕಾಂಗ್ರೆಸ್ ಕಾರ್ಯಕ್ರಮ ಅನ್ನುವುದಕ್ಕೆ ಅವರು ಹಾಗೆ ಆಡಬೇಕಾಗಿತ್ತು. ಅದರಂತೆ ಅವರು ಆಡುತ್ತಿದ್ದಾರೆ. But, ನೀವು ಮಾಡಬೇಕು. ಅಲ್ಲಿಯವರೆಗೆ ನೀವೇನು Vigilance Committee ಮಾಡಿದ್ದೀರೋ, ಅದು ಎಲ್ಲಾದರೂ ಮನೆಗಳನ್ನು ತಡೆದರೆ, change ,ಮಾಡಿಕೊಡುವ ಅಧಿಕಾರವನ್ನು ತಾವು ನಮಗೆ ಕೊಡಬೇಕು. ಅಲ್ಲಿಯವರೆಗಾದರೂ ...

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ? ಈಗ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು: ಈಗ ನಾನು ಮಾನ್ಯ ಸಚಿವರನ್ನು ಕರೆದಿದ್ದೇನೆ. ಅವರು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ಬಸವರಾಜ್‌ರವರೆ, ತಾವು ಈ ತರಹ ಮಾತನಾಡಿದರೆ ಹೇಗೆ? ಈಗಾಗಲೇ ಬಹಳಷ್ಟು ಜನ ಮಾತನಾಡಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ. ಆಶ್ರಯ ಸಮಿತಿಯಲ್ಲಿ ಇವತ್ತು ಗ್ರಾಮ ಪಂಚಾಯತಿಗಳಲ್ಲಿ ಏನು ತೀರ್ಮಾನ ಮಾಡುತ್ತಿದ್ದಾರೋ, ಆ ತೀರ್ಮಾನವನ್ನು ನಾವೇನಾದರೂ ಜಾಗೃತ ಸಮಿತಿಯಲ್ಲಿ ಮರು ಪರಿಶೀಲಲನೆಗೆ ಮಾಡಿದೆವು ಎಂದರೆ, ಅಲ್ಲಿ ರಾಜಕೀಯ ಮಾಡುತ್ತಿದ್ದಾರೆ ಎನ್ನುತ್ತಾರೆ. ಅವರು ನೋಡಮ್ಮ ನಿನಗೆ ಬೇಕಾದಂತಹ ಮನೆಯನ್ನು ಆಯ್ಕೆ ಪಟ್ಟಿ ಮಾಡಿ ಕಳುಹಿಸಿದರೆ, ಆ ಶಾಸಕರು ತಡೆಹಿಡಿದರು ಎನ್ನುತ್ತಾರೆ. ಇದು ಜಾಗೃತ ಸಮಿತಿಯಲ್ಲಿ ಆಗಬೇಕಾಗಿದೆಯೇ?

ಎರಡನೆಯದಾಗಿ ಇನ್ನೊಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಚೆಪಡುತ್ತಿದ್ದೇನೆ. ನಾವು ವಿಕೇಂದ್ರೀಕರಣ ಮಾಡುವ ಸಂದರ್ಭದಲ್ಲೇ ಆ ಭಾರ ಹೊರಲಿಕ್ಕೆ ಗ್ರಾಮ ಪಂಚಾಯತಿ ತಯಾರಿದೆಯಾ? ಆ ಸಿದ್ದತೆ ಮಾಡಿದ್ದೀರಾ? ಹಿಂದೆ ಏನು ಗ್ರಾಮ ಪಂಚಾಯತಿ ವ್ಯವಸ್ಥೆ ಇತ್ತು ಆ ವ್ಯವಸ್ಥೆಗೆ ಇವತ್ತು ಎಲ್ಲವನ್ನೂ ವರ್ಗೀಕರಣ ಮಾಡಿದ್ದೀರಿ. ಭಾರ ಹೊತ್ತುಕೊಂಡು ಕೆಲಸ ಮಾಡುವಂತಹ ಅಧಿಕಾರಿಗಳ ತಂಡ ಅಲ್ಲಿ ಎಲ್ಲಿದೆ ಸಾರ್? ಖಂಡಿತ ಇಲ್ಲ. ಅಕೌಂಟಿಂಗ್ ಮಾಡುವುದಕ್ಕೆ ಬರುತ್ತಿಲ್ಲ.

ಅಧ್ಯಕ್ಷರು: ಮಾತನಾಡುತ್ತಾ ಹೋದರೆ ಇದಕ್ಕೆ ಅಂತಿಮ ಎಲ್ಲಿದೆ? ಪ್ರತಿಯೊಬ್ಬರೂ ಅವರವರ ರೀತಿಯಲ್ಲಿ ಮಾತನಾಡುತ್ತಾರೆ. ಇದಕ್ಕೆ ಎಂಡ್ ಎಲ್ಲಿದೆ? ಅವರು ಸಮಗ್ರವಾಗಿ ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ. ದೇವೇಗೌಡರೇ, ಬಸವರಾಜರವರೇ ದಯಮಾಡಿ ಕುಳಿತುಕೊಳ್ಳಿ. ಒಂದು ಮಾತು ನಾನು ಹೇಳುತ್ತೇನೆ. ಆಶ್ರಯ ಸಮಿತಿಗಳು ಇದ್ದಾಗ ಏನು ದೂರು ಇತ್ತು? ಶಾಸಕರ ಹಿಂಬಾಲಕರು ಮನೆಗಳನ್ನು ತೆಗೆದುಕೊಳ್ಳುತ್ತಾರೆಂಬ ದೂರು ಇತ್ತು. ಈಗ ಪಂಚಾಯತಿಗಳಿಗೆ ಕೊಟ್ಟಿದ್ದೀರಿ. ಈ ಪಂಚಾಯತಿಗಳಲ್ಲಿ ಅವರಿಗೆ ಬೇಕಾದ ಸದಸ್ಯರು ಒಂದೆರಡು ಮನೆಗಳನ್ನು ಹಂಚಿಕೊಳ್ಳುತ್ತಿದ್ದಾರೆಂಬ ದೂರು ಇದೆ. ಇದು ನಿರಂತರವಾಗಿ ಇದೆ. ಯಾರು ಗುಡಿಸಲುಗಳಲ್ಲಿದ್ದಾರೆ. ಯಾರು ಬಡವರಿದ್ದಾರೆ ಅವರುಗಳಿಗೆ ಮನೆ ಸಿಗುತ್ತಿಲ್ಲ ಎನ್ನುವುದು ಸೂರ್ಯ ಪೂರ್ವ

ದಿಕ್ಕಿನಲ್ಲಿ ಹುಟ್ಟುತ್ತಾನಲ್ಲಾ ಅಷ್ಟೇ ಸತ್ಯ. ಅದು ಯಾರೂ ನಿರಾಕರಿಸುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಎಲ್ಲಾ ಸದಸ್ಯರುಗಳಲ್ಲಿ ಪ್ರಾರ್ಥನೆ ಮಾಡುವುದು. ಸಭಾ ನಾಯಕರು, ವಿರೋಧ ಪಕ್ಷದ ನಾಯಕರು ಎಲ್ಲರಲ್ಲಿಯೂ ಪ್ರಾರ್ಥನೆ ಮಾಡುತ್ತೇನೆ, ಪ್ರಾಕ್ಟಿಕಲ್ಲಾಗಿ ಬಡವರಿಗೆ ಮನೆ ಸಿಗಬೇಕು. ಅದನ್ನು ಯಾವ ರೀತಿ ಮಾಡಬೇಕೆಂದು ಗಂಭೀರವಾಗಿ ವಿಚಾರ ಮಾಡಿ. ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಬಡವರ ಹೆಸರಿನಲ್ಲಿ ಖರ್ಚು ಮಾಡುತ್ತಿದ್ದೇವೆ. ಆದರೆ ಅವರಿಗೆ ತಲುಪುತ್ತಿದೆಯಾ? ಅದು ಬಹಳ ಮುಖ್ಯ. ಆದ್ದರಿಂದ ದಯಮಾಡಿ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಏನಾದರೂ ಒಂದು ಎವಾಲ್ಡ್ ಮಾಡಿ ಬಡವರಿಗೇ ಮನೆ ಸಿಗಬೇಕು ಆ ನಿಟ್ಟಿನಲ್ಲೇ ಯಾವ ರೀತಿ ಮಾಡಬೇಕು ಹೇಳಿ. ನೀವು ಏನಾದರೂ ವಿಚಾರ ಇದ್ದರೆ ಹೇಳಿ.

ಶ್ರೀ ಜೆ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದರು, ಮೊದಲು ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಇದಕ್ಕೆ ರೂವಾರಿ ಎಂದು ಅಧಿಕಾರ ವಿಕೇಂದ್ರೀಕರಣದ ರೂವಾರಿಯಾದ ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರು ಎಲ್ಲಾ ಪಕ್ಷಗಳವರನ್ನು ಸರ್ವಸಮ್ಮತದಿಂದ ಒಗ್ಗೂಡಿಸಿ ಟೂ ಟೈರ್ ಸಿಸ್ಟಮ್ ತಂದು ಜಿಲ್ಲಾಪಂಚಾಯತ್ ಮತ್ತು ಮಂಡಲ ಪಂಚಾಯತಿ ಕಾಯಿದೆ ಜಾರಿಗೆ ತಂದರು. ಅಬ್ದುಲ್ ನಜೀರ್ ಸಾಬ್‌ರವರು. ದಿವಂಗತ ರಾಜೀವ್‌ಗಾಂಧಿಯವರು ಮೂರು ಹಂತದ ವ್ಯವಸ್ಥೆ ಮಾಡಿದರು. ಮೂರು ಹಂತದ ವ್ಯವಸ್ಥೆ ಮಾಡುವಾಗ ಏಕ ಪಕ್ಷೀಯವಾಗಿ ರಾಜ್ಯದ ಬಗ್ಗೆ ತೀರ್ಮಾನ ತೆಗೆದುಕೊಂಡರು. ನಜೀರ್‌ಸಾಬ್‌ರವರ ತರಹ ಎಲ್ಲಾ ಪಕ್ಷದವರನ್ನು ಒಗ್ಗೂಡಿಸಿ...

ಮಾನ್ಯ ಸದಸ್ಯರು: ಈ ರೀತಿ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಅವರ ಅಭಿಪ್ರಾಯ ಹೇಳುತ್ತಾರೆ ದಯಮಾಡಿ ಕೇಳಿ. ಇದು ಬಹಳ ಗಂಭೀರವಾದ ವಿಚಾರ, ಬಡವರ ಪ್ರಶ್ನೆ. ದಯಮಾಡಿ ಕೇಳಿ.

ಶ್ರೀ ಎಸ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಜೀರ್‌ಸಾಬ್‌ರವರು ನಮಗೆ ಬಹಳ ಆತ್ಮೀಯ ಸ್ನೇಹಿತರು. ನಜೀರ್‌ಸಾಬ್‌ರವರು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿ ಸಾಕಷ್ಟು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅವರನ್ನು ನೀರಸಾಬ್ ಎಂದೇ ಹೇಳುತ್ತಿದ್ದೇನು. ಅವರ ಕೆಲಸಕಾರ್ಯಗಳಿಗೆ ಯಾರೂ ಅಡ್ಡ ಬರುತ್ತಿರಲಿಲ್ಲ.

ಆದರೆ ರಾಷ್ಟ್ರ ಮಟ್ಟದಲ್ಲಿ ಸನ್ಮಾನ್ಯ ರಾಜೀವ್ ಗಾಂಧಿಯವರು ಸಂವಿಧಾನ ತಿದ್ದುಪಡಿ ಮೂಲಕ ಏನು ಕೆಲಸ ಮಾಡಿದ್ದಾರೆ. ಅದರಿಂದ ದೇಶಕ್ಕೆ ಒಳ್ಳೆಯದಾಗಿದೆ. ಈ ದೇಶದಲ್ಲಿರತಕ್ಕಂತಹ ಬಡವರು ಮತ್ತು ದೀನದಲಿತರಿಗೆ ಅಧ್ಯಕ್ಷರಾಗತಕ್ಕಂತಹದ್ದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ತಿದ್ದುಪಡಿ ಮಾಡಿ ಒಂದು ಬಹಳ ದೊಡ್ಡ ಕ್ರಾಂತಿಕಾರಕವಾದ ವಿಧೇಯಕ ಅವರ ಕಾಲದಲ್ಲಿ ಆಗಿದೆ. ರಾಜ್ಯದಲ್ಲಿ ನಜೀರ್‌ಸಾಬ್‌ರವರು ಒಳ್ಳೆಯ ಕೆಲಸ ಮಾಡಿದ್ದಾರೆ.

ಅಧ್ಯಕ್ಷರು: ಬಡವರಿಗೆ ಮನೆಗಳು ಸಿಗಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನನ್ನ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಿ.

ಶ್ರೀ ಡಿ.ಜಿ.ಜಯಕುಮಾರ್: ಉತ್ತರ ಕೊಡುತ್ತೇನೆ. ಅವರು ಅಲೋಚನೆ ಮಾಡಲಿ.

ಅಧ್ಯಕ್ಷರು: ಮಾನ್ಯ ಖರ್ಗೆಯವರು ಅವರ ಸಲಹೆಗಳನ್ನು ಕೊಡುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನ್ನ ಕ್ಲಾರಿಫಿಕೇಷನ್ ಒಂದೇ. ಮಾನ್ಯ ಮಾಧುಸ್ವಾಮಿಯವರು ಮಾತನಾಡುವ ಭರಾಟೆಯಲ್ಲಿ ಹೇಳಿದರು. ಕಾಂಗ್ರೆಸ್‌ನವರು ತಮ್ಮ ಯಾವುದೋ ಪ್ರತಿಷ್ಠೆಗೋಸ್ಕರ ಅದನ್ನು ಮಾಡಿರಬಹುದು. ಅದಕ್ಕಾಗಿ ಏನು ಎಲ್ಲ ತಬಲ ಮತ್ತು ಪಿಟೀಲು ಬಾರಿಸುವುದಕ್ಕೇ ಬಂದಿರುವ ಹಾಗೆ ಇದೆ.

ಅಧ್ಯಕ್ಷರು: ಅವರ ಮಾತನ್ನು ಕೇಳಿ, ಅಷ್ಟಕ್ಕೇ ನೀವು ಪ್ರತಿಭಟನೆ ಮಾಡಿದರೆ ಹೇಗೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಲ್ಲಾ ತಬಲ ಮಾಸ್ಟರ್ಸ್ ಮತ್ತು ಪಿಟೀಲ್ ಮಾಸ್ಟರೇ ಬಂದಿದ್ದೀರಿ. ಈ ಸಂವಿಧಾನ ತಿದ್ದುಪಡಿ ಮಾಡಿದ್ದು ಯಾವುದೋ ಒಂದು ಪಕ್ಷದ ಪ್ರತಿಷ್ಠೆಗೋಸ್ಕರ ಅಲ್ಲ. ಹಳ್ಳಿಗಳಲ್ಲಿರತಕ್ಕಂತಹ ರೈತರ ಕೈಯಲ್ಲಿ ಅಧಿಕಾರ ಕೊಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಸಂವಿಧಾನ ತಿದ್ದುಪಡಿ ಆಗಿದ್ದು. ಆ ಸಂವಿಧಾನ ತಿದ್ದುಪಡಿಯಲ್ಲಿ ಕೆಲವು ಕಾರ್ಯಕ್ರಮಗಳು ಇರಬಹುದು. ಆ ಕಾರ್ಯಕ್ರಮ ಏನು ಸಂವಿಧಾನ ಶೆಡ್ಯೂಲ್‌ನಲ್ಲಿ ಬರಲಿಲ್ಲ. ನಾವು ಹಾಕಿಕೊಂಡಂತಹ ಕಾರ್ಯಕ್ರಮ. ನಾಳೆ ಮನೆ ಕಟ್ಟುವುದನ್ನು ನಿಲ್ಲಿಸಬಹುದು. ನಿಮ್ಮ ಬಜೆಟ್‌ನಲ್ಲಿ ಅಲೋಕೇಷನ್ ಇರಲಿಲ್ಲವೆಂದರೆ, ವಿಕೇಂದ್ರಿಕರಣಕ್ಕೆ ಇದಕ್ಕೆ ಏನು ಸಂಬಂಧ ಇರುತ್ತದೆ? ನಾವು ಏನೋ ಪ್ರತಿಷ್ಠೆಗೋಸ್ಕರ ಮಾತನಾಡುತ್ತೇನೆ ಎನ್ನತಕ್ಕಂಥದ್ದಲ್ಲ. ಕೆಲವು ಕಾರ್ಯಕ್ರಮಗಳನ್ನು ಅವರಿಗೆ ಕೊಟ್ಟರೆ ಚೆನ್ನಾಗಿ ಮಾಡಬಹುದು, ಎನ್ನತಕ್ಕಂತಹ ದೃಷ್ಟಿಯಿಂದ ಒಂದು ಎಕ್ಸ್‌ಪೆರಿಮೆಂಟ್‌ನಲ್ಲಿ ಇದೆಲ್ಲಾ ಮಾಡಿದ್ದೇವೆ. ಅದರಲ್ಲಿ ಏನಾದರೂ ನ್ಯೂನತೆ ಇದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಏನು ವಿಧಾನ

ಮಾಡಬೇಕು ಅದನ್ನು ಹೇಳಿ. ನೆಗಡಿ ಬಂದಿದೆ ಎಂದು ಮೂಗು ಕೊಯ್ದುಕೊಳ್ಳುವುದಕ್ಕಾಗುತ್ತದಾ? ಹಾಗೆಯೇ ವಿಕೇಂದ್ರೀಕರಣದ ಒಂದು ಪದ್ದತಿಯನ್ನು ನಾವೇನು ಅನುಸರಿಸಿದ್ದೇವೆ ಅಥವಾ ವಿಕೇಂದ್ರಿಕರಣದ ರೀತಿಯನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ, ಅದನ್ನು ಕೈ ಬಿಡುವುದಕ್ಕಾಗುವುದಿಲ್ಲ. ಅದರಲ್ಲಿ ಸುಧಾರಣೆ ಮಾಡಿ, ಏನು ಯಾವ ರೀತಿಯಾಗಿ ನಾವು ಹಂಚಬಹುದು, ಅಥವಾ ಯಾವ ರೀತಿಯಾಗಿ ತಪ್ಪು ಬೆನಿಫಿಷಿಯರೀಸ್‌ಗೆ ಹೋದರೆ ಅದನ್ನು ತೆಗೆದು ಕೊಡಬಹುದು, ಎನ್ನುವುದಕ್ಕೆ ಬೇಕಾದರೆ ಒಂದು ಸಂಶೋಧನೆ ಮಾಡಿ ಏನಾದರೂ. ಗವರ್ನ್‌ಮೆಂಟ್ ಆರ್ಡರ್‌ನಲ್ಲಿ ಬದಲಾವಣೆ ಮಾಡಿ. ಅದನ್ನು ಬಿಟ್ಟು ಕಾರ್ಯಕ್ರಮ ಸರಿ ಇಲ್ಲ. ಅದನ್ನು ತೆಗೆಯಿರಿ. ಅಧ್ಯಕ್ಷರಾಗಿ ನಮಗೆ ಮಾಡಿ. ಇವರಿಗೆ ಮಾಡಿ ಎಂದು ಹೇಳಿಕೊಂಡು ಹೋದರೆ, ಹೇಗೆ? ಈ ದೇಶದಲ್ಲಿ ರೈತನಿಗೆ ಅತ್ಯಂತ ಪ್ರಿಯವಾದುದು ಏನು? ಭೂಮಿ ಜಮೀನು. ಆ ಗೇಣಿದಾರನ ಭವಿಷ್ಯವನ್ನು ನಿರ್ಣಯ ಮಾಡತಕ್ಕಂಥದ್ದು ನೀವು ನಾನ್ ಅಫಿಷಿಯಲ್ ಮೆಂಬರ್ಸ್ ಒಂದು ಮನೆ ಕೊಡುವುದಕ್ಕೆ ಪಂಚಾಯತಿಯಲ್ಲಿ ಅವರಿಗೆ ಹಕ್ಕು ಇಲ್ಲ ಎಂದರೆ ಇದು ಯಾವ ನ್ಯಾಯ? ಗ್ರಾಮ ಪಂಚಾಯತಿ ಸಭೆಯಲ್ಲಿ ಹಂಚತಕ್ಕಂತಹ ಅಧಿಕಾರ ಇಲ್ಲ. ನೀವು ಭೂಸುಧಾರಣೆ ಕಾನೂನಿನಲ್ಲಿ ಭೂಮಿ ಹಂಚಬಹುದು. ಕೊಡಬಹುದು, ಗೇಣಿದಾರರು ಯಾರು ಎಂದು ನಿರ್ಣಯ ಮಾಡಬಹುದು. ಸರ್ಪ್ಲಸ್ ಭೂಮಿಯನ್ನು ಡಿಟರ್‌ಮೈನ್ ಮಾಡಬಹುದು. ಸರ್ಕಾರಿ ಭೂಮಿಯನ್ನು ರೆಗ್ಯಲರೈಸ್ ಮಾಡಬಹುದು. ಯಾರು ಮಾಲೀಕರು, ಯಾರು ಇಲ್ಲವೆಂದು ನೀವು ನಿರ್ಣಯ ತೆಗೆದುಕೊಳ್ಳಬಹುದು. ಆ ಭಾಗದಲ್ಲಿರಕ್ಕಂತಹ ಗ್ರಾಮೀಣ ಭಾಗದ ಜನರಿಗೆ ಒಂದು ಅಧಿಕಾರ ಕೊಟ್ರೆ ಅದನ್ನೂ ನಮಗೇಬೇಕೆಂದು ನಾವು ಹೇಳಿಕೊಂಡರೆ ಇದು ಸರಿಹೋಗುವುದಿಲ್ಲ.

ಅಧ್ಯಕ್ಷರು: ಹೀಗಾದರೆ ಚರ್ಚೆ ಎಂಡ್ ಆಗುವುದಿಲ್ಲ. ಇದಕ್ಕೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ಹೇಳಬೇಕೆಂಬ ಆಸಕ್ತಿ ಇದೆ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರ ಮೂಲ ಪ್ರಶ್ನೆ ಏನೆಂದರೆ, ಒಂದು ತಿಂಗಳ ಹಿಂದೆ ನಗರ ಪ್ರದೇಶಗಳ ಒಂದು ಆಶ್ರಯ ಸಮಿತಿ ಏನು ರಚನೆ ಮಾಡಿದ್ದರು, ಅವರು ಮೀಟಿಂಗ್ ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಈಗ ಒಂದು ಸರ್ಕ್ಯುಲರ್ ಬಂದಿದೆ. ಅದನ್ನು ರದ್ದುಪಡಿಸಿ ಮತ್ತೆ ಯಾವಾಗ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ತಾವೂ ಜನವರಿಯಲ್ಲಿ ಒಂದು ಸರ್ಕ್ಯುಲರ್ ಕಳುಹಿಸುರುತ್ತೀರಿ ಆಶ್ರಯ ಸಮಿತಿಗಳನ್ನು ರಚನೆ ಮಾಡಿ, ಅದರ ಜೊತೆಯಲ್ಲೇ ಇನ್ನೊಂದು ಸರ್ಕ್ಯುಲರ್ ಕಳುಹಿಸಿದ್ದಿರಿ, 250 ಮನೆಗಳನ್ನು ನಾವು ಕೊಡುತ್ತಿದ್ದೇವೆ, ನೀವು ಆಶ್ರಯ ಸಮಿತಿಯ ಸಭೆ ಸೇರಿ ಫಲಾನುಭವಿಗಳನ್ನು ಗುರುತಿಸಬೇಕೆಂದು ಇನ್ನೊಂದು ಸರ್ಕ್ಯುಲರ್ ಕಳುಹಿಸಿದಿರಿ. ಅದರ ಆಧಾರದ ಮೇಲೆ ನಾವು ಸಮಿತಿ ಸೇರಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಆಯಿತು. ನಾನು ಒಬ್ಬನೇ ಅಲ್ಲ, ಎಲ್ಲರೂ ಮಾಡಿದ್ದಾರೆ. ಈ ತಿಂಗಳ ಕೊನೆಯಲ್ಲಿ ರದ್ದುಪಡಿಸಿದ್ದೇವೆಂದು ಬಂದಿದೆ. ಇದರ ಪರಿಸ್ಥಿತಿ ಏನು?

ಶ್ರೀ ಡಿ.ಕೆ.ಜಯಕುಮಾರ್: ಮಾನ್ಯ ಸಭಾಧ್ಯಕ್ಷರೆ, ಅದು ಕ್ಲೀಯರ್ ಆಗಿದೆ. ರದ್ದುಪಡಿಸಿರುವಂತಹ ವಿಚಾರ ಹಿಂದಿನದಕ್ಕೆ ಅನ್ವಯಿಸುವುದಿಲ್ಲ. ಈಗ ಹೊಸದಾಗಿ ಆಯ್ಕೆ ಮಾಡಿದರೆ ರದ್ದುಪಡಿಸಬೇಕಾಗುತ್ತದೆ. ನೀವೇನಾದರೂ ಈಗಾಗಲೇ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರೆ ಅದು ರದ್ದು ಮಾಡುವುದಕ್ಕೆ ಬವರುವುದಿಲ್ಲ. ಯಾವ ತಾರೀಖಿನಿಂದ ನಾವು ರದ್ದುಪಡಿಸಿ ಮತ್ತೆ ಪುನಃ ಹೊಸದಾಗಿ ಮಾಡಬೇಕೆಂದು ಇದ್ದೇವೆ ಅದಕ್ಕೆ ಅನ್ವಯಿಸುತ್ತದೆ. ಹಿಂದಿನದಕ್ಕೆ ಅನ್ವಯಿಸುವುದಿಲ್ಲ. ಏನು ನೀವು ಈಗ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೀರಿ, ಅದಕ್ಕೆ ಅನ್ವಯಿಸುತ್ತದೆ. ಆಪ್ರಕಾರ ನಡೆದುಕೊಂಡು ಹೋಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ತಮ್ಮ ಭಾವನೆಗಳು ಮತ್ತು ಹೆಚ್ಚಿನ ಶಾಸಕರ ಭಾವನೆಗಳು ನಮಗೆ ಅರ್ಥ ಆಗಿವೆ, ಆದ್ದರಿಂದ ತಾವು ದಯಮಾಡಿ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟರೆ ಇದನ್ನು ಹೆಚ್ಚು ಚರ್ಚೆ ಮಾಡಬಹುದು. ನಮಗೆ ಅಧಿಕಾರ ವಿಕೇಂದ್ರಿಕರಣ ನಿಲ್ಲಿಸಬೇಕೆಂದೂ ಇಲ್ಲ. ಅಧಿಕಾರಿಗಳಿಗೆ ಸರಿಯಾದ ತರಬೇತಿ ಇಲ್ಲ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿದ ರಸ್ತೆಗಳ ದುಸ್ಥಿತಿ

103(28); ಶ್ರೀ ಪಾಟೀಲ್ ಎಸ್.ಎಸ್.(ಮುಂಡರಗಿ);

ಮಾನ್ಯ ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್.ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ರಸ್ತೆಗಳು ಯಾವುವು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಈ ರಸ್ತೆಗಳು ಸಂಚಾರಕ್ಕೆ ಯೋಗ್ಯವಲ್ಲದಷ್ಟು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ದುರಸ್ಥಿ ಕಾಮಗಾರಿ ಮಾಡಲು ಕೈಗೊಂಡ ಕ್ರಮಗಳೇನು?